ಹಾಲು ಮಾರಿ ದಿನ ತೆಗೆಯುತ್ತಿದ್ದ ಗೋವಿಂದ ಭಟ್ಟರ ವಿಧವಾ ಪತ್ನಿ ಸುಶೀಲಮ್ಮ ಶಂಭಟ್ಟರ ಮನೆಗೆ ಧಾವಿಸಿ ಬಂದು 'ಶಂಭಣ್ಣ ನನ್ನ ದನ ದರೆಯಿಂದ ಕೆಳಗೆ ಜಾರಿ ಬಿದ್ದಿದೆ' ಎಂದು ಹೇಳುತ್ತಲೇ ಗೋಳೋ ಎಂದು ಅಳತೊಡಗಿದರು. ಶಂಭಟ್ಟರು 'ಅಯ್ಯೋ ದೇವರೇ!' ಎಂದು ಸೊಂಟದಿಂದ ಜಾರುತ್ತಿದ್ದ ಪಂಚೆಯನ್ನು ಎತ್ತಿ ಬಿಗಿದು ಕಟ್ಟಿ 'ಇವಳೇ, ನಾನು ಸುಶೀಲಕ್ಕನ ಮನೆಗೆ ಹೋಗಿ ಬರುತ್ತೇನೆ' ಎಂದು ಹೆಂಡತಿಯನ್ನು ಕೂಗಿ 'ನಡೆಯಿರಿ' ಎಂದು ಸುಶೀಲಮ್ಮನ ಜೊತೆ ಅವರ ಮನೆಗೆ ಹೊರಟರು.

ಅಡುಗೆ ಕೋಣೆಯಲ್ಲಿ ಭರಣಿಯಿಂದ ಉಪ್ಪಿನಕಾಯಿ ತೆಗೆದು ಸಣ್ಣ ಕರಡಿಗೆಯಲ್ಲಿ ತುಂಬಲು ಹೊರಟಿದ್ದ ಶಂಕರಿಯಮ್ಮನಿಗೆ ಗಂಡ ಹೇಳಿದ್ದು ಸರಿಯಾಗಿ ಅರ್ಥ ಆಗದೆ ಆಕೆ 'ನೀವು ಎಲ್ಲಿಗೆ ಹೊರಟದ್ದು?' ಎಂದು ಒಳಗಿನಿಂದ ಪ್ರತಿಯಾಡಿ ವಿಷಯ ತಿಳಿದ ಮೇಲೆ 'ಹಾಗಾದರೆ ನಾನೂ ಬರ್ತೇನೆ ನಿಮ್ಮ ಜೊತೆಗೆ!' ಎಂದು ಮುಂದಾದರು.

ಈಗ ವಿಧವೆಯಾಗಿರುವ ಸುಶೀಲಮ್ಮನ ಗಂಡ ಗೋವಿಂದ ಭಟ್ಟರು ಊರ ಪುರೋಹಿತರ ಜೊತೆ ಪರಿಕರ್ಮಕ್ಕೆ ಹೋಗುತ್ತಿದ್ದ ವ್ಯಕ್ತಿ. ಆರ್ಥಿಕವಾಗಿ ಮತ್ತು ಸದಾ ಗೂರಲು (ಉಬ್ಬಸ) ರೋಗದಿಂದ ಅವರು ಬಳಲುತ್ತಿದ್ದರೂ, ತಪ್ಪಿಯೂ ಯಾರನ್ನೂ ಬೇಡಿದವರಲ್ಲ. ಅಥವಾ ಯಾರಿಗೂ ತಮ್ಮ ಕಷ್ಟವನ್ನು ಹೇಳಿದವರಲ್ಲ. ಪುರೋಹಿತ ಗೋಪಾಲ ಭಟ್ರಿಗೆ ಈ ಕಾರಣದಿಂದಲೇ ಅವರ ಮೇಲೆ ತುಂಬಾ ಪ್ರೀತಿ ಇತ್ತು. ಸಂತಾನ ಭಾಗ್ಯ ಇಲ್ಲದ ಗೋವಿಂದಭಟ್ಟರು ಪರಿಕರ್ಮದಿಂದ ಬಂದ ಅಷ್ಟಿಷ್ಟು ಉತ್ಪತ್ತಿಯಿಂದ ಸಂಸಾರ ಸಾಗಿಸುತ್ತಿದ್ದುದನ್ನು ನೋಡಿ ಊರ ಮಂದಿ ಕಷ್ಟದಿಂದ ದಿನ ದೂಡುತ್ತಿದ್ದಾನೆ ಎನ್ನುತ್ತಿದ್ದರು. ಹೆಂಡತಿ ಸುಶೀಲಮ್ಮನಾದರೋ ಬ್ರಾಹ್ಮಣರ ಮನೆಯ ಸಣ್ಣ ಅಡುಗೆಗೆ ಅರ್ಥಾತ್ ಶಿವಪೂಜೆ, ಸತ್ಯನಾರಾಯಣ ಪೂಜೆ, ಶ್ರಾದ್ಧಾದಿಗಳ ಒಳ ಅಡುಗೆಗೆ ಹೋಗಿ ಗಂಡನ ಸಂಪಾದನೆಗೆ ತನ್ನ ಕೊಡುಗೆಯನ್ನು ಸೇರಿಸುತ್ತಿದ್ದರು. ಆದರೆ ಇತ್ತೀಚೆಗೆ ಈ ಸಣ್ಣ ಅಡುಗೆ ಎನ್ನುವುದು ಕಡಿಮೆಯಾಗುತ್ತಾ ಬಂದು ದೊಡ್ಡ ಅಡುಗೆಯ ಮರ್ಜಿ ಪ್ರಾರಂಭವಾದಾಗ ಅದಕ್ಕೆ ದೊಡ್ಡ ದೊಡ್ಡ ಅಡುಗೆ ಭಟ್ಟರೇ ಬೇಕು ಎನ್ನುವುದು ಫ್ಯಾಶನ್ ಆಗಿ ಹೋಗಿದ್ದರಿಂದ ಸುಶೀಲಮ್ಮನನ್ನು ಅಡುಗೆಗೆ ಕರೆಯುವ ಮಂದಿ ಕಡಿಮೆಯಾಗಿತ್ತು. ಆದರೆ ಆಕೆ ಸುಮ್ಮನಿರುವ ಹೆಂಗಸಲ್ಲ. ಊಟಕ್ಕೆ ಕರೆದಲ್ಲಿಗೆಲ್ಲ ಹೋಗಿ ಅಲ್ಲಿ ಮೊದಲ ಪಂಕ್ತಿಗೆ ಊಟಕ್ಕೆ ಕೂಡದೇ ಪಂಕ್ತಿಗೇ ಬಡಿಸಲು ಮುಂದಾಗುತ್ತಿದ್ದುದರಿಂದ ಮನೆ ಮಂದಿ ಪಾಪ ಪರಿಕರ್ಮಿಯವರ ಹೆಂಡತಿ ಅಲ್ಲವಾ? ಎಂದು ಆಕೆಗೆ ಐವತ್ತೋ ನೂರೋ ರೂಪಾಯನ್ನು ನೀಡುತ್ತಿದ್ದರು. ಆದರೆ ಸ್ವಾಭಿಮಾನಿಯಾದ ಸುಶೀಲಮ್ಮ ಅದನ್ನು ಬೇಡ ಎನ್ನುತ್ತಲೇ ಮುಖ ಸಣ್ಣದು ಮಾಡಿ ಕೃತಜ್ಞತೆಯಿಂದ ತೆಗೆದುಕೊಂಡು ದೇವರು ದೊಡ್ಡವ, ಈ ದಿನ ಇಷ್ಟಾದರೂ ಕೊಡಿಸಿದನಲ್ಲ ಎಂದು ಬೀಗುತ್ತಿದ್ದರು.

ಗೋವಿಂದ ಭಟ್ಟರು ಎರಡು ವರ್ಷಗಳ ಹಿಂದೆ ನ್ಯುಮೋನಿಯಕ್ಕೆ ಒಳಗಾಗಿ ಆಷಾಢ ಮಾಸದ ಭೋರ್ಗರೆಯುವ ಮಳೆಯ ಗದ್ದಲದಲ್ಲಿ ನಿಧನರಾದಾಗ ಅವರ ಪತ್ನಿಯಾದ ಈ ಸುಶೀಲಮ್ಮ ಕಣ್ಣೀರಿಟ್ಟ ಹಾಗೆ ಪುರೋಹಿತ ಗೋಪಾಲಭಟ್ರೂ ಎಂಥ ಅನ್ಯಾಯ ಇದು! ಎಂದು ದೇವರಿಗೇ ಬೈದಿದ್ದರು. ದೇವರು ಅದನ್ನು ಕೇಳಿಸಿಕೊಂಡೂ ಸುಶೀಲಮ್ಮನ ಹಸಿವೆಯನ್ನು ತಣಿಸದೇ ಇದ್ದಾಗ, ಗೋಪಾಲಭಟ್ಟರೇ ತಿಂಗಳ ಮೇಲೆ ಆಕೆಯಿದ್ದಲ್ಲಿಗೆ ತನ್ನ ಮಗನನ್ನು ಕಳುಹಿಸಿ 'ಗೋದಾನವಾಗಿ ಬಂದ ಅರೆ ಜೆರ್ಸಿ ದನವೊಂದು ನನ್ನ ಹಟ್ಟಿಯಲ್ಲಿದೆ. ಅದು ಕರು ಹಾಕಿ ಒಂದು ವಾರ ಆಯ್ತಷ್ಟೆ. ನೀನು ದನ ಸಾಕಿ ಹಾಲು ಮಾರಿ ಸುಧಾರಿಸಿಕೊಳ್ಳುವುದಾದರೆ ದನವನ್ನು ನಮ್ಮಲ್ಲಿಂದ ಕೊಂಡು ಹೋಗಬಹುದು' ಎಂಬ ಸಲಹೆಯನ್ನು ಆಕೆಗೆ ಮುಟ್ಟಿಸಿದರು. ಸುಶೀಲಮ್ಮನಿಗೆ ಅದು ಸ್ವರ್ಗ ಸಿಕ್ಕಿದಷ್ಟು ಖುಶಿಯಾಯಿತಾದರೂ, ದನಕ್ಕೆ ಎಷ್ಟು ರೇಟು ಹೇಳುತ್ತಾರೋ ಏನೋ! ಹಣವನ್ನು ನಾನು ಹೊಂದಾಣಿಸುವುದು ಹೇಗೆ? ಎಂದು ಆಕೆ ಆತಂಕಗೊಂಡು 'ನನಗೆ ಖಂಡಿತ ದನ ಬೇಕು, ಆದರೆ ದನದ ರೇಟು ಗೀಟು ಗೊತ್ತಿಲ್ಲದೆ ನಾನು ಬೇಕು ಅನ್ನುವುದು ಹೇಗೆ?' ಎಂದು ಚಡಪಡಿಸಿದರು.

ಪುರೋಹಿತರ ಮಗ 'ಅದು ಯಾವುದನ್ನೂ ಅಪ್ಪ ನನ್ನಲ್ಲಿ ಹೇಳಲಿಲ್ಲ. ನೀವೊಮ್ಮೆ ಬಂದು ಹೋಗಿ ಯಾವುದಕ್ಕೂ' ಎಂದ. ಹೀಗೆ ಹೇಳಿದ ಆ ಹುಡುಗ ಅಂಗಳದಿಂದ ಕೆಳಗಿಳಿಯುತ್ತಿದ್ದ ಹಾಗೆ ಪಕ್ಕದ ಮನೆಯ ಶಂಭಣ್ಣನ ಮನೆಗೆ ಓಡಿ ಹೋದ ಸುಶೀಲಮ್ಮ ಶಂಭಟ್ಟರನ್ನೂ ಅವರ ಹೆಂಡತಿ ಶಂಕರಮ್ಮನನ್ನೂ ಒಟ್ಟೊಟ್ಟಿಗೆ ದೊಡ್ಡದಾದ ಸ್ವರದಲ್ಲಿ ಹೆಸರೆತ್ತಿ ಕೂಗುತ್ತಾ ಭಟ್ಟರ ಹಜಾರಕ್ಕೆ ಕಾಲಿಟ್ಟರು. ಶಂಭಟ್ಟರು ಅವರ ಪತ್ನಿಯೂ ಓ ಓ, ಎನ್ನುತ್ತಾ ಹೊರಗೆ ಬಂದಾಗ, ಸುಶೀಲಮ್ಮ ಒಂದೇ ಉಸಿರಿಗೆ ಎಲ್ಲಾ ವಿಷಯವನ್ನೂ ಅವರಿಬ್ಬರ ಮುಂದಿಟ್ಟು 'ಪುರೋಹಿತರು ಎಷ್ಟು ರೇಟು ಹೇಳುತ್ತಾರೋ ಗೊತ್ತಿಲ್ಲ. ನೀವು ಒಂದಿಷ್ಟು ನೆರವಾದರೆ ನಾನು ಆ ದನವನ್ನು ಕೊಂಡುಕೊಂಡೇನು' ಎಂದು ಚಾವಡಿಯ ಕಂಬಕ್ಕೆ ಒರಗಿ ನಿಟ್ಟುಸಿರು ಬಿಟ್ಟರು.

ಶಂಕರಮ್ಮ ಗಂಡನ ಮುಖ ನೋಡಿ ನೆರವಾಗಬಹುದು ಎಂಬಂತೆ ಕಣ್ಸನ್ನೆ ಮಾಡಿದಾಗ ಶಂಭಟ್ಟರು 'ಆಗಲೇ ಕರಗಿ ಹೋಗಿ ಚಿಂತೆ ಮಾಡಬೇಡಿ ಸುಶೀಲಕ್ಕ, ನಾವೆಲ್ಲ ಇದ್ದೇವೆ ನಿಮ್ಮ ಜೊತೆ. ಪುರೋಹಿತರು ನಿಮ್ಮ ವಿಷಯದಲ್ಲಿ ಉದಾರವಾಗಿ ನಡಕೊಂಡಾರು' ಎಂದು ಆಕೆಯನ್ನು ಸಂತೈಸಿ 'ನಾನು ನಿಮ್ಮ ಜೊತೆ ಪುರೋಹಿತರಲ್ಲಿಗೆ ಬರುವುದು ಚೆನ್ನಾಗಿರುವುದಿಲ್ಲ! ನೀವು ಒಬ್ಬರೇ ಹೋಗಿ ಪುರೋಹಿತರನ್ನು ನೋಡಿ! ನಿಮಗಂತೂ ಅವರು ಪರಿಚಯ ಇಲ್ಲದವರಲ್ಲ ತಾನೇ!' ಎಂದರು.

ಮರುದಿನ ಸುಶೀಲಮ್ಮ ಪುರೋಹಿತರನ್ನು ಭೇಟಿಯಾಗಿ ಲೋಕಾಭಿರಾಮವಾಗಿ ಅವರ ಕಷ್ಟಸುಖ ವಿಚಾರಿಸಿ 'ನಿಮ್ಮ ದನದ ರೇಟು ಕೊಡುವಷ್ಟು ದೊಡ್ಡವಳಲ್ಲ ನಾನು! ನಿಮ್ಮ ಪರಿಕರ್ಮಿಯಾಗಿದ್ದ ನನ್ನ ಗಂಡನ ಮುಖ ನೋಡಿ ನೀವು ದನದ ರೇಟು ಹೇಳಬೇಕು. ಗಂಡ ಸತ್ತಾಗ ನನ್ನ ಬಳಿ ಅವರು ಕಟ್ಟಿದ್ದ ತಾಳಿಯನ್ನು ತೆಗೆದಿರಿಸಿದ್ದರೂ ಅದನ್ನು ಈ ತನಕ ಕರಗಿಸಿಲ್ಲ. ಈಗ ಅದನ್ನು ಕರಗಿಸಿ ಅದರಿಂದ ಬರುವ ದುಡ್ಡನ್ನು ನಾನು ನಿಮಗೆ ಕೊಟ್ಟೇನು' ಎಂದು ಕೈಮುಗಿದರು.

ಪುರೋಹಿತರಿಗೆ ಸಾತ್ವಿಕ ಸಿಟ್ಟು ಬಂತು. ಅವರು 'ಏನಮ್ಮಾ ನನ್ನನ್ನು ನೀನು ಅರ್ಥ ಮಾಡಿಕೊಂಡದ್ದು ಇಷ್ಟೇನಾ?' ಎಂದು ಪ್ರಶ್ನಿಸಿ ಮೊದಲು ಹಟ್ಟಿಗೆ ಹೋಗಿ 'ದನ ನಿನಗೆ ಆದೀತೋ ಹೇಗೆ ಎಂದು ನೋಡು. ಆಮೇಲೆ ಉಳಿದ ಮಾತು' ಎಂದರು.

ಸುಶೀಲಮ್ಮ ಹಟ್ಟಿಯ ಕಡೆ ನಡೆದರು. ಪುರೋಹಿತರೂ ಅವರ ಪತ್ನಿಯೂ ಹಟ್ಟಿಯ ಕಡೆ ನಡೆದು ಅರೆಜೆರ್ಸಿ ದನದ ಬಳಿ ಸಾರಿ 'ಇದೇ ದನ' ಎಂದು ಗೋದಾವರಿಯನ್ನು ತೋರಿಸಿದರು. ಆ ದನ ಪುರೋಹಿತ ದಂಪತಿಯನ್ನು ಮೂಸಲು ಹತ್ತಿತು. ಸುಶೀಲನಮ್ಮನೂ ಸೇರಿ ಮೂವರೂ ಆ ದನದ ಮೈ ದಡವಿದರು.

ಸುಶೀಲಮ್ಮನ ಕಣ್ಣು ಅರಳಿತು. ಮಿರಿಮಿರಿ ಮಿಂಚುತ್ತಿದ್ದ ಗೋದಾವರಿಯ ಕುತ್ತಿಗೆ ತಲೆ ಬೆನ್ನನ್ನು ಮತ್ತೆ ಮತ್ತೆ ನೀವಿದ ಆಕೆ ದನ ಅಂದರೆ ದನ ಎಂದು ಆಡಿದಾಗ ಅದನ್ನು ಕೇಳಿಸಿಕೊಂಡ ಪುರೋಹಿತರು 'ಈಗ ಇದರ ಎರಡನೇ ಕರುವಿನ ಸರದಿ. ಇನ್ನು ಇದು ಹತ್ತು ಕರು ಹಾಕಲೂ ಬಹುದು, ನಿಮಗೆ ಅನ್ನ ಮಾತ್ರವಲ್ಲ. ಇದು ಚಿನ್ನವನ್ನೂ ಕೊಟ್ಟೀತು' ಎನ್ನುತ್ತಾ ಚಾವಡಿಯಾಚೆ ನಡೆದರು. ಅವರನ್ನು ಹಿಂಬಾಲಿಸಿ ಬಂದ ಸುಶೀಲಮ್ಮ ಚಾವಡಿಯಲ್ಲಿ ನಿಧಾನವಾಗಿ ಕುಂಡೆ ಊರಿ, 'ಈ ದನಕ್ಕೆ ಎಷ್ಟು ರೇಟು ಎಂದು ನಾನು ಕೇಳುವುದು ತಪ್ಪು. ಎಷ್ಟು ಕೊಡಬೇಕು ಎಂದು ನೀವು ಹೇಳಿದರೆ ಈಗಲ್ಲವಾದರೂ ಮುಂದೆ ಅಷ್ಟನ್ನು ನಾನು ಹಾಲು ಮಾರಿಯಾದರೂ ಕೊಟ್ಟೇನು' ಎಂದು ಕೈಮುಗಿದರು.

ಪುರೋಹಿತರು ಮಾತೇ ಆಡಲಿಲ್ಲ. ಸುಶೀಲಮ್ಮ ಮತ್ತೆ 'ಸ್ವಾಮೀ ನೀವು ಮಾತನಾಡುತ್ತಿಲ್ಲ' ಎಂದು ವಿನಂತಿಸಿದ್ದಕ್ಕೆ ಪುರೋಹಿತರು 'ಇದು ನನಗೆ ದಾನರೂಪದಲ್ಲಿ ಬಂದ ದನ! ಇದನ್ನು ನನಗೆ ಮಾರುವ ಹಕ್ಕಿಲ್ಲ! ದಾನ ಕೊಟ್ಟವರು ನನ್ನ ಸಂಸಾರ ಇದರ ಹಾಲು ಕರೆದು ಉಣ್ಣಬೇಕು ಎಂದು ತಾನೇ ನನಗೆ ದಾನ ನೀಡಿದ್ದು?. ಹಾಗಾಗಿ ನೀನು ಏನೂ ಕೊಡುವುದೂ ಬೇಡ. ಮನೆಗೆ ಕೊಂಡು ಹೋಗಿ ಚೆನ್ನಾಗಿ ಸಾಕಿ ಹಾಲು ಕರೆದು ಉಣ್ಣು. ಆದರೆ ಈಗ ಇರುವ ಅದರ ಹೆಣ್ಣು ಕರು ಕಾವೇರಿ ಮುಂದೆ ದೊಡ್ಡದಾಗಿ ಅದಕ್ಕೆ ಗಬ್ಬ ನಿಂತು ಆಮೇಲೆ ಅದು ಕರು ಹಾಕಿ ಹಾಲು ಕರೆಯಲು ಪ್ರಾರಂಭವಾಯಿತು ಎಂದ ಮೇಲೆ ನೀನು ಈ ಗೋದಾವರಿಯನ್ನು ನನಗೆ ವಾಪಾಸು ಮಾಡಿದರೆ ಸಾಕು' ಎಂದರು.